ಅ) ಕರ್ನಾಟಕ ಭೂ ಕಂದಾಯ ನಿಯಮಗಳು ೧೯೬೯ನೇ ಳಿ ಮತ್ತು ಳಿ ನೇ ನಿಯಮಗಳ ಪ್ರಕಾರ ಪ್ರತಿಯೊಂದು ಪ್ರಕರಣವನ್ನು ರಾಜಸ್ವ ನಿರೀಕ್ಷಕ ಮತ್ತು ಶಿರಸ್ತೇದಾರನು ಅಥವಾ ಅವನ ದರ್ಜೆಗೆ ಸಮನಾದ ಅಥವಾ ಮೇಲ್ಪಟ್ಟ ರೆವಿನ್ಯೂ ಇಲಾಖೆಯ ಯಾವನೊಬ್ಬ ಅಧಿಕಾರಿಯು ಪರಿಶೀಲಿಸುತ್ತಿರುವರು.

ಆ) ಹೌದು.

ಈ) ಇಂತಹ ಪ್ರಕರಣಗಳು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಅಥವಾ ಸರ್ಕಾರದ ಗಮನಕ್ಕೆ ಬಂದಾಗ ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳ ೧೯೬೬ರ ಪ್ರಕಾರ ವಿಚಾರಣೆ ನಡೆಸಿ ಕಾನೂನಿನ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲಾಗುವುದು.

ಉ) ಕಾನೂನನ್ನು ಉಲ್ಲಂಘಿಸಿ ಪಹಣಿಯನ್ನು ಬದಲಾವಣೆ ಮಾಡುವ ನೌಕರನ ಅಥವಾ ಅಧಿಕಾರಿಯ ಮೇಲೆ ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು ನಿಯಮಗಳು, ೧೯೫೭ರ ಪ್ರಕಾರ ಉಗ್ರ ಕ್ರಮವನ್ನು ತೆಗೆದುಕೊಳ್ಳಲಾಗುವುದು.)

ಹೆರಿಗೆ ಭತ್ಯದ ಬಗ್ಗೆ

೬೬೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೆರಿಗೆ ಭತ್ಯೆ ಯೋಜನೆಯನ್ನು ತಾಲ್ಲೂಕು ಕೇಂದ್ರ ಪಟ್ಟಣ, ನಗರ ಪ್ರದೇಶಗಳಿಗೆ ಅನ್ವಯವಾಗಬಹುದಿಲ್ಲವೇ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಜಿ. ಬಸವಣ್ಣಪ್ಪ, (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಅನ್ವಯವಾಗುವುದಿಲ್ಲ. ಈ ಯೋಜನೆಯಡಿಯಲ್ಲಿ ಹಳ್ಳಿಗಳಲ್ಲಿ ವಾಸಿಸುವ ಭೂ ರಹಿತ ಕೃಷಿ ಕಾರ್ಮಿಕ ಮಹಿಳೆಯರು ಮಾತ್ರ ಪ್ರಯೋಜನ ಪಡೆಯಲು ಅವಕಾಶವಿದೆ. ಇದು ಗ್ರಾಮೀಣ ಮಹಿಳೆಯರ ವಿಶೇಷ ಸಮಸ್ಯೆಗಳನ್ನು ಮನಗಂಡು ಅವರಿಗಾಗಿ ರಚಿಸಿರುವ ಯೋಜನೆ.

ರಾಯಚೂರು ಜಿಲ್ಲಾ ಗಂಗಾವತಿಯ ಟಿ. ಎ. ಪಿ. ಸಿ. ಎಂ. ಎಸ್. ನಲ್ಲಿ ಹಣದ ದುರುಪಯೋಗದ ಬಗ್ಗೆ

೭೧೭. (೧) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಯಚೂರು ಜಿಲ್ಲೆಯ ಗಂಗಾವತಿಯ ತಾಲ್ಲೂಕು ಅಗ್ರಿಕಲ್ಚರ್ ಪ್ರೊಡ್ಯೂಸ್ ಕೋ ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ೩೫ ಲಕ್ಷ ರೂ.ಗಳು ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಟಿ. ಎ. ಪಿ. ಸಿ. ಎಂ. ಎಸ್. ನಲ್ಲಿ ಹಣ ದುರುಪಯೋಗದ ಬಗ್ಗೆ ಲೆಕ್ಕ ಪತ್ರಗಳ ತನಿಖೆ ನಡೆಸಲಾಗಿದೆಯೇ ?

ಇ) ಸದರಿ ಸಹಕಾರ ಸಂಘದಲ್ಲಿ ಕೆಲಸ ಮಾಡುತ್ತಿರುವವರು ತಮ್ಮ ವರಮಾನಕ್ಕೂ ಮೀರಿ ಬೆಲೆಬಾಳುವ ಆಸ್ತಿ ಪಾಸ್ತಿಗಳನ್ನು ಮಾಡಿದ್ದಾರೆ ಎಂಬ ದೂರು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಈ ಬಗ್ಗೆ ಸರಿಯಾದ ವಿಚಾರಣೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆ ?